ಮತ್ತು ಅನಂತಕೃಷ್ಣರವರು ಈ ಪ್ರಶ್ನೆಯನ್ನು ಕೇಳಿದರು. ಇಲ್ಲಿಂದ ಯಾರು ಹೋಗುತ್ತಾರೋ ಅವರಿಗೆ ಸಾಕಷ್ಟು ಡಿಸ್‌ಕ್ರಿಶನರಿ ಪವರ್ಸ್ ಇರುತ್ತದೆ. ಅವರು ಎಷ್ಟು ಬೇಕಾದರೂ ಹಾಕಬಹುದು ಎಂದು. ಇವತ್ತು ಬೆಳಿಗ್ಗೆ ನಾನು ನಮ್ಮ ಮುನಿಸಿಪಲ್ ಡೈರೆಕ್ಟರ್‌ನ್ನು ಕರೆಸಿ ಇಲ್ಲಿಂದ ನೀವು ಅಸೆಸ್ ಮಾಡುವುದಕ್ಕೆ ಯಾರನ್ನೂ ಕಳುಹಿಸಬೇಕಾಗಿಲ್ಲ.

ಅಲ್ಲಿನ ಮುನಿಸಿಪಾಲಿಟಿಯಲ್ಲಿ ಅಥವಾ ಕಾರ್ಪೋರೇಷನಲ್ಲಿರತಕ್ಕಂಥಾವರನ್ನೇ ಒಬ್ಬರನ್ನು ಕಳುಹಿಸಿ ಅಸ್ಸೆಸಿಂಗ್ ಆಫೀಸರ್ ಎಂದು ಮಾಡಬಹುದು ಇಲ್ಲಿಂದ ಬೇಕಾದರೆ ಇನ್ಸ್‌ಪೆಕ್ಟಿಂಗ್ ಆಫೀಸರ್ಸ್‌ನ್ನು ಕಳುಹಿಸಿ ರ್‍ಯಾಂಡಂ ಚೆಕ್ಕಿಂಗ್ ಮಾಡುವ ಅವಕಾಶ ಮಾಡಿಕೊಳ್ಳಿ ಎಂದು ಹೇಳಿ ತೀರ್ಮಾನ ತೆಗೆದುಕೊಂಡಿದ್ದೇವೆ. ಇನ್ನು ಸೈಂಟಿಫಿಕ್ ಆಗಿ ಅಸ್ಸೆಸ್‌ಮೆಂಟ್ ಮಾಡುವುದು ನಿಜವಾಗಿ ಅವಶ್ಯಕತೆ ಇದೆ. ಈ ವಿಚಾರದಲ್ಲಿ ಈಗಾಗಲೇ ಕಮಿಟಿ ಸೇರಿದೆ. ಗುಲ್ಬರ್ಗದಲ್ಲಿ ಸಂಪೂರ್ಣವಾಗಿ ಕಂಪ್ಯೂಟರೈಜ್ಡ್ ಮಾಡಿದ್ದಾರೆ. ಆ ವಿಷಯ ಸಹ ಸಮಿತಿ ಮುಂದೆ ಇದೆ. ಇದು ಜೋನ್ ವೈಜ್ ಇರಬೇಕೇ ಯಾವ ಟೈಪ್ ಮನೆ ಇರಬೇಕು, ಸ್ಟಯರ್ ಫೀಟ್‌ಗೆ ಇರಬೇಕೇ ಈ ತರಹ ಯಾವರೀತಿ ಎಂದು ಚಿಂತನೆ ಮಾಡುತ್ತಿದ್ದೇವೆ. ಆದಷ್ಟು ಬೇಗ ವೈಜ್ಞಾನಿಕ ರೀತಿಯಲ್ಲಿ ಮನೆ ಕಂದಾಯ ಪ್ರಾಪರಿಟಿ ಟ್ಯಾಕ್ಸ್ ಅಸ್ಸೆಸ್‌ಮೆಂಟ್ ಮಾಡುವ ಕೆಲಸವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಸಚಿವರು ಹೇಳಿದರು ಇಲ್ಲಿಂದ ನಾವು ಕಳುಹಿಸುವುದಿಲ್ಲ. ಅಲ್ಲಿಯೇ ಇರುವವರನ್ನೇ ನೇಮಕ ಮಾಡುತ್ತೇವೆಂದು. ಇದರ ಅರ್ಥ ಇಲ್ಲಿಂದ ಬಂದು ದುಡ್ಡು ಹೊಡೆದುಕೊಳ್ಳುವುದು ಬೇಡ ಅಲ್ಲಿರುವವರಿಗೆ ಅವಕಾಶ ಮಾಡಿ ಕೊಟ್ಟಿದ್ದೇವೆಂದು. ಇದರಿಂದ ಜನಗಳಿಗೆ ಏನೂ ಉಪಯೋಗವಾಗುವುದಿಲ್ಲ. ಇಡೀ ರಾಜ್ಯದಲ್ಲಿ ಯಾರು ಅಸ್ಸೆಸ್ ಮಾಡುತ್ತಿದ್ದಾರೆ ಅವವು ಲೂಟಿ ಮಾಡುವುದಕ್ಕೆ ಒಂದು ದೊಡ್ಡ ಅವಕಾಶ ಮಾಡಿಕೊಟ್ಟಿದ್ದೀರಿ. ನನ್ನ ಪ್ರಶ್ನೆ ಏನೆಂದರೆ ಇಂತಿಷ್ಟೇ ಸಮಯದಲ್ಲಿ ಎಂದು ಆ ಸಮಿತಿಯವರಿಗೆ ಕಾಲ ನಿಗಧಿ ಮಾಡಬೇಕು ಎಂದು ಸರ್ಕಾರ ಆಜ್ಞೆ ಮಾಡುತ್ತದೆಯೇ? ಒಂದು ವರ್ಷ ಕೊಡಿ ಆರು ತಿಂಗಳು ಕೊಡಿ ಇಂತಿಷ್ಟು ಸಮಯ ಎಂದು ಕೊಡಿ ನೀವು ಎಷ್ಟೇ ಸಮಯ ಕೊಡಿ ಆ ಸಮಯದೊಳಗೆ ಅವರು ಒಂದು ನೀತಿ ನಿಯಮ ತೀರ್ಮಾನ ಮಾಡಬೇಕು ಸರ್ಕಾರ ಎಷ್ಟು ಸಮಯದಲ್ಲಿ ಆ ಸಮಿತಿಯಿಂದ ವರದಿ ಕೊಡಿಸುವುದಕ್ಕೆ ಆಜ್ಞೆ ಮಾಡುತ್ತದೆ?

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೇ ಇನ್ನು 6 ತಿಂಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಪ್ರಾಪರಿಟಿ ಟ್ಯಾಕ್ಸ್ ಹೌಸಿಂಗ್ ಅಸ್ಸೆಸ್‌ಮೆಂಟ್ ಮಾಡಲು ಸರ್ಕಾರ ತೀರ್ಮಾನ ತೆಗೆದುಕೊಂಡು ಅದರ ಪ್ರಕಾರ ಮಾಡುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಬಿನಂದನೆಗಳು.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ತುಮಕೂರು ನಗರದಲ್ಲಿ ವಾಹನ ರಿಪೇರಿ ಮಾಡುವವರನ್ನು ತೆರವು ಮಾಡುವುದು.

2768 - ಶ್ರೀ ಬಿ.ಎಸ್. ಶಿವನಂಜಪ್ಪ, (ಗುಬ್ಬಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ನಗರದ ಬಿ.ಹೆಚ್. ರಸ್ತೆಯಲ್ಲಿ ಕೆಲವರು ವಾಹನಗಳನ್ನು ರಿಪೇರಿ ಮಾಡುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇದರಿಂದ ವಾಹನಕ್ಕೆ, ಸಾರ್ವಜನಿಕರಿಗೆ ಓಡಾಡಲು ತೊಂದರೆ ಆಗುವುದಿಲ್ಲವೇ?

ಇ) ಇವುಗಳನ್ನು ತೆರವು ಮಾಡಿಸಲು ಸರ್ಕಾರ ಕ್ರಮಕೈಗೊಳ್ಳಲಾಗುವುದೇ? ಹಾಗೂ ಎಂದಿನಿಂದ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

ನಗರಸಭೆ ತುಮಕೂರು, ಸಂಚಾರಿ ಪೋಲಿಸ್ ಮತ್ತು ಲೋಕೋಪಯೋಗಿ ಇಲಾಖೆ ಜಂಟಿ ಕಾರ್ಯಾಚರಣೆ ಮಾಡಿ ಅಂಗಡಿಗಳನ್ನು ತೆಗೆದುಹಾಕಲು ಕ್ರಮ ತೆಗೆದುಕೊಂಡಿದ್ದಾರೆ.

ನಿಟ್ಟೂರಿನಲ್ಲಿ ಟ್ರಾಫಿಕ್ ಸ್ಟೇಷನ್ ತೆರೆಯುವುದು.

2766 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ನಿಟ್ಟೂರು ಸುತ್ತಮುತ್ತ ಹಾಗೂ ಬಿ.ಹೆಚ.ರಸ್ತೆಯಲ್ಲಿ 1989-90, 90-91ರಲ್ಲಿ ಎಷ್ಟು ಅಪಘಾತಗಳು ಸಂಭವಿಸಿರುತ್ತವೆ.

ಆ) ನಿಟ್ಟೂರಿನಲ್ಲಿ ಟ್ರಾಫಿಕ್ ಸ್ಟೇಷನ್ ಸ್ಥಾಪಿಸಲು ಶಾಸಕರು ಮತ್ತು ಸಾರ್ವಜನಿಕರು ಹಾಗೂ ಇಲಾಖೆಯವರು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೆ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ? ಇಲ್ಲದಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ)

	1989-90	9-91
ಮರಣಾಂತಿಕ	5	8
ಸಾಮಾನ್ಯ	27	23

ಆ) ಶಾಸಕರಿಂದ ಇಲ್ಲ. ಆದರೆ ದಿನಾಂಕ: 18-12-90ರಂದು ನಿಟ್ಟೂರು ಮಂಡಲ ಪಂಚಾಯಿತಿ ಅಧ್ಯಕ್ಷರು ಮನವಿಯೊಂದನ್ನು ಕಳುಹಿಸಿದ್ದಾರೆ.

ಇ) ಈ ಮನವಿಯೂ ಸಹ ಸರ್ಕಾರದ ಪರಿಶೀಲನೆಯಲ್ಲಿದೆ. ಆಧ್ಯತೆ, ಅಗತ್ಯತೆ, ಹಾಗೂ ಆರ್ಥಿಕ ಸಂಪನ್ಮೂಲಗಳನ್ನುನುಸರಿಸಿ ಈ ವಿಷಯವನ್ನು ಪರಿಶೀಲಿಸಲಾಗುವುದು.

ಕರ್ನಾಟಕ ಲೋಕಸೇವಾ ಆಯೋಗದ ಉಪ ವಿಭಾಗಗಳು.

2635 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಲೋಕಸೇವಾ ಆಯೋಗದ ವಿಭಾಗೀಯ ಕಛೇರಿಗಳನ್ನು ತೆರೆಯಲು ಸರ್ಕಾರವು ಉದ್ದೇಶಿಸಿದೆಯೇ?